<u>ದಿನಾಂಕ 03-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>

**<u>ಮುಂದುವರಿದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಎಸ್ ವಕೀಲರಿಂದ</u>**

6) ನಾನು ಕಟ್ಟಿರುವ ಕಟ್ಟಡಕ್ಕೂ ಮತ್ತು ಪ್ರತಿವಾದಿಯ ಮಂಜೂರಾತಿಯ ಯೋಜನೆಯ ಮಂಜೂರಾತಿ ನಕಾಶೆಗೂ ವ್ಯತ್ಯಾಸ ಇರುತ್ತದೆ ಎಂದರೆ ನಿಜ. ಅದು ಎಷ್ಟು ವ್ಯತ್ಯಾಸ ಎಂದರೆ, ಪ್ರತಿವಾದಿಯವರು ಬದಲಾವಣೆಗಳನ್ನು ಹೇಳಿದಂತೆ ಕಾಮಗಾರಿಯನ್ನು ಮಾಡಿಕೊಟ್ಟಿದ್ದೇನೆ. ಮಂಜೂರಾತಿಯಾದ ನಕಾಶೆಯ ಬದಲಾಗಿ ಮಾಡಿದ ಕಾಮಗಾರಿಯ ಖರ್ಚಿಗಾಗಿ ಪ್ರತ್ಯೇಕ ಕರಾರು ಮಾಡಿಕೊಂಡಿಲ್ಲ ಆದರೆ, ಪ್ರತಿವಾದಿಯ ಒಪ್ಪಿಗೆಯನ್ನು ಪಡೆದೆ ಮಾಡಿದ್ದೆ. ಪ್ರತಿವಾದಿಯು ಪಾವತಿಸಿದ ಹಣಕ್ಕಾಗಿ ಸ್ವೀಕೃತಿಯನ್ನು ನಿ.ಪಿ 1 ರ ಕರಾರಿನಲ್ಲಿ ತೋರಿಸಿದಂತೆ ಪಾವತಿ ಆಗಿದೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯವರಿಂದ ನಗದಿನಲ್ಲಿ, ಚೆಕ್ ಮೂಲಕವೂ ಮತ್ತು ಅವರ ಖಾತೆಯಿಂದ ನನ್ನ ಖಾತೆಗೆ ವರ್ಗಾವಣೆ ಮೂಲಕವೂ, ಪ್ರತಿವಾದಿಯವರ ಹೆಂಡತಿಯ ಖಾತೆಯ ಮುಲಕವೂ ಸಹ ಪಾವತಿಯಾಗಿರುತ್ತದೆ. ಪ್ರತಿವಾದಿಯವರಿಂದ ನನಗೆ ಪಾವತಿಯಾದ ಒಟ್ಟು ಹಣಕ್ಕಾಗಿ ದಾಖಲೆ ಇದೆ. ಅದಕ್ಕಾಗಿ ದಾಖಲೆ ಹಾಜರುಪಡಿಸಬಲ್ಲೆ. ಪ್ರತಿವಾದಿಯವರಿಂದ ನನಗೆ ಕಾಮಗಾರಿಗೆ ಸಂಬಂಧಿಸಿದಂತೆ 32 ಲಕ್ಷ ರೂಪಾಯಿಗಳ ಹಣ ಪಾವತಿಯಾಗಿದೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯವರಿಂದ ಕಾಮಗಾರಿಗೆ ಸಂಬಂಧಿಸಿದಂತೆ ಕಾಮಗಾರಿಯ ಮೌಲ್ಯಕ್ಕಿಂತಲೂ ಹೆಚ್ಚಿನ ಹಣ ಪಾವತಿಯಾಗಿದೆ ಎಂದರೆ ಸರಿಯಲ್ಲ.

7) ನಾನು ಪೊಲೀಸರಿಗೆ ಪ್ರತಿವಾದಿಯಿಂದ ನನಗೆ ಸಂದಾಯವಾಗಬೇಕಿದ್ದ ಹಣವೆಲ್ಲ ಪಾವತಿಯಾಗಿರುವುದಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಬಾಕಿ ಉಳಿದ ಕೆಲಸಕ್ಕೆ ಹಣ ಪಾವತಿಸಿದರೆ ಆ ಕೆಲಸ ನಾನು ಮುಗಿಸಿ ಕೊಡುವುದಾಗಿ ಒಪ್ಪಿದ್ದೆ ಎಂದರೆ ನಿಜ. ಅದು ನಿ.ಪಿ 8 3 ರ ಹಿಂಬರಹ ಎಂದರೆ ಸರಿಯಲ್ಲ.

8) ನಾನು ಪ್ರತಿವಾದಿಯವವರ ಕೆಲಸವನ್ನು 2019 ರ ಸಾಲಿನಲ್ಲಿ. ದಿನಾಂಕ ತಿಂಗಳು ಈಗ ನೆನಪಿಲ್ಲ. ಆ ರೀತಿ ಕೆಲಸ ನಿಲ್ಲಿಸುವ ಮೊದಲು ಪ್ರತಿವಾದಿಯವರಿಗೆ ನಾನು ನೋಟಿಸ ಕೊಟ್ಟಿಲ್ಲ. ನಾನು ಪ್ರತಿವಾದಿಯ ಹತ್ತಿರ

ಕಾಮಗಾರಿಯ ಬಗ್ಗೆ ರಾಜಿ ಪಂಚಾಯಿತಿ ಮಾಡಿಲ್ಲ. ಆದರೆ, ಪ್ರತಿವಾದಿಯವರು ಕರೆಸಿದ್ದರಿಂದ ಹೋಗಿದ್ದೆ. ಆ ನಂತರದಿಂದ ನಾನು ಕೆಲಸ ಮಾಡಿಲ್ಲ. ನಾನು ಕೆಲಸ ನಿಲ್ಲಿಸಿದಾಗ ಬಾಕಿ ಇದ್ದ ಕೆಲಸದ ಬಗ್ಗೆ ಮತ್ತು ನಾನು ಮಾಡಿದ್ದ ಕೆಲಸದ ಬಗ್ಗೆ ವಿವರಗಳನ್ನು ನಾನು ನೀಡಿಲ್ಲ. ಆಗ ನಾನು ಕೆಲಸ ನಿಲ್ಲಿಸಿದಾಗಿನ ಸಮಯದ ಫೋಟೋಗಳು ಇವೆ ಅವುಗಳನ್ನು ಹಾಜರುಪಡಿಸಬಲ್ಲೆ. ನಾನು ಹೇಳಿದಂತೆ ಪ್ರತಿವಾದಿಯ ಕಾಮಗಾರಿಯ ಶೇಕಡಾ 75 ರಷ್ಟು ಭಾಗದ ಕೆಲಸವನ್ನು ನಾನು ಮುಗಿಸಿಲ್ಲ ಎಂದರೆ ಸರಿಯಲ್ಲ.

9) ಪ್ರತಿವಾದಿ ನನ್ನ ಮೇಲೆ ದೂರು ಕೊಟ್ಟಿದ್ದು ತಾರೀಕು 14-08-2022 ಎಂದರೆ ನಿಜ. ಅದರ ನಂತರ ಕಾಮಗಾರಿಯನ್ನು ಪ್ರತಿವಾದಿಯವರೆ ಮುಂದುವರೆಸಿಕೊಂಡಿದ್ದಾರೆ ಎಂದರೆ ನಿಜ. ಪ್ರತಿವಾದಿ ನನಗೆ ಸಂಬಂಧಿಕರು ಎಂದರೆ ನಿಜ. ಆ ಕಾರಣದಿಂದಲೇ ಕಾಮಗಾರಿಯನ್ನು ನನಗೆ ನೀಡಿದ್ದು ಎಂದರೆ ಇರಬಹುದು. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರಿಕ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಕೇಳಿದಷ್ಟು ಬಡ್ಡಿಯನ್ನು ಪಾವತಿಸಲು ಪ್ರತಿವಾದಿಯವರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಒಪ್ಪಿಪಿದಂತೆ ಕಾಮಗಾರಿಯನ್ನು ಪೂರ್ಣಗೊಳಿಸದೆ ಇದ್ದುದ್ದರಿಂದ ಪ್ರತಿವಾದಿಗೆ ಕಷ್ಟವಾಗಿದೆ ಎಂದರೆ ಅವರು ನನ್ನ ಕಾಮಗಾರಿಗೆ ಪಾವತಿಸಬೇಕಾದ ಹಣವನ್ನು ಪಾವತಿಸಿಲ್ಲ. ನಾನು ಕೇಳಿದಷ್ಟು ಪರಿಹಾರದ ಹಣವನ್ನು ಪಾವತಿಸಲು ಪ್ರತಿವಾದಿ ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

10) ದಾವೆಯಲ್ಲಿ ಹೇಳಿದ ರೂ.61,300/- ಗಳಷ್ಟು ಬೆಲೆ ಬಾಳುವ ಕಾಮಗಾರಿಯ ಸಾಮ್ರಾಗ್ರಿಗಳು ಇರುವ ಬಗ್ಗೆ ನನ್ನ ಬಳಿ ಫೋಟೋ ಇದೆ. ನಾನು ಅಲ್ಲಿ ನಾನು ಹೇಳಿದಂತಹ ಸಾಮ್ರಾಗ್ರಿಗಳನ್ನು ಬಿಟ್ಟು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೂ ಸಹ ಸದ್ರಿ ಸಾಮ್ರಾಗ್ರಿಗಳ ಬಾಬ್ತು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನನ್ನ ಮೇಲೆ ವ್ಯಾಜ್ಯ ಮಾಡುತ್ತಾರೆಂಬ ಕಾರಣಕ್ಕಾಗಿ ನಾನು ಅವರ ಮೇಲೆ ಅವರಿಗಿಂತ ಮೊದಲು ತೊಂದರೆ ಮಾಡಬೇಕೆಂದು ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

11) ಪ್ರತಿವಾದಿಯವರು 15 ಲಕ್ಷಕ್ಕಿಂತಲೂ ಹೆಚ್ಚಿನ ಹಣ ಖರ್ಚು ಮಾಡಿ ಬಾಕಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಾರೆ ಎಂದರೆ ಗೊತ್ತಿಲ್ಲ. ನಾನು ದಾವೆಯಲ್ಲಿ ಕೇಳಿದಂತಹ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ವಾಣಿಜ್ಯ ನ್ಯಾಯಾಧೀಶರು ,
ಉಡುಪಿ